ತರೀಕೆರೆ ತಾಲ್ಲೂಕಿನಲ್ಲಿ ಸ್ಥಳೀಯ ಬಸ್ಸುಗಳು

೮೮೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ)—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಪತಿಯಿಂದ ಎಷ್ಟು ಸ್ಥಳೀಯ ಬಸ್ಸುಗಳು ಓಡಾಡುತ್ತಿವೆ.

ಆ) ೧೯೬೬-೬೭ ಹಾಗೂ ೧೯೬೭-೬೮ರಲ್ಲಿ ಈ ಬಗ್ಗೆ ಬಂದ ಮನವಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಎಷ್ಟು ಕಾರ್ಯಗತ ಮಾಡಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು)—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ಕೆಳಗೆ ತೋರಿಸಿರುವ ಮಾರ್ಗಗಳಲ್ಲಿ ಸೀಮಿತವಾಗಿ ವಾಹನಗಳನ್ನು ಓಡಿಸುತ್ತಿದೆ.

೧. ತರೀಕೆರೆ—ಶಿವನಿ

೨. ತರೀಕೆರೆ—ರೋಪ್ ವೇ ಕಾಲೋನಿ

೩. ಕಡೂರು—ಬೀರೂರು—ಕೊಡ್ಲೂರು—ಮುಂಡ್ರೆ

೪. ತರೀಕೆರೆ—ಕೆಮ್ಮಣ್ಣುಗುಂಡಿ

ಇದಲ್ಲದೆ, ತರೀಕೆರೆ ಮುಖಾಂತರ ಸಂಚರಿಸುತ್ತಿರುವ ಸಂಸ್ಥೆಯ ವಾಹನಗಳು ತರೀಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸುಮಾರು ೩೦ ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸುತ್ತಿದೆ.

ಆ) ೧೯೬೬-೬೭ರಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲು ಮಾನ್ಯ ಶಾಸಕರ ೧೨ ಸಲಹೆಗಳೂ ಸೇರಿದಂತೆ ೧೫ ಸಲಹೆಗಳನ್ನೊಳಗೊಂಡ ೧೦ ಮನವಿ ಪತ್ರಗಳು ಬಂದಿದ್ದು ಇದರಲ್ಲಿ ೮ ಸಲಹೆಗಳನ್ನು ಕಾರ್ಯಗತ ಮಾಡಲಾಗಿದೆ.

೧೯೬೭-೬೮ರಲ್ಲಿ (೨೭-೧-೧೯೬೮ರ ವರೆಗೆ) ಮಾನ್ಯ ಶಾಸಕರ ಸಲಹೆಗಳೂ ಸೇರಿದಂತೆ ೧೦ ಸಲಹೆಗಳನ್ನೊಳಗೊಂಡ ೪ ಮನವಿ ಪತ್ರಗಳು ಬಂದಿದ್ದು, ಆ ಪೈಕಿ ೧ ಸಲಹೆಯನ್ನು ಕಾರ್ಯಗತ ಮಾಡಲಾಗಿದೆ. ಈ ಪ್ರದೇಶವು ರಾಷ್ಟ್ರೀಕರಣವಾಗದೇ ಇರುವುದರಿಂದ ಉಳಿದ ಸಲಹೆಗಳನ್ನು ಕಾರ್ಯಗತ ಮಾಡಲಾಗಲಿಲ್ಲ

೧೯೬೫-೬೬ನೇ ಸಾಲಿನಲ್ಲಿ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡಲಾಗಿರುವ ಸಂಖ್ಯೆ

೮೮೩. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೫-೬೬ನೇ ಸಾಲಿನಲ್ಲಿ ಅಮಾನತ್ತಿನಲ್ಲಿಟ್ಟಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ?

ಆ) ಅಮಾನತ್ತಿನಲ್ಲಿಟ್ಟ ನೌಕರರಲ್ಲಿ ಪೂರ್ಣವಾಗಿ ಕೆಲಸ ಕಳೆದುಕೊಂಡವರ ಸಂಖ್ಯೆ ಎಷ್ಟು ?

ಇ) ಆಡಳಿತ ಸುಧಾರಣೆಗಾಗಿ ಸರ್ಕಾರದವರು ವಿಶೇಷ ಯೋಜನೆಯನ್ನೇನಾದರೂ ರೂಪಿಸಿಕೊಂಡಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೧೬೮೮

ಆ) ೫೩

ಇ) ಅಮಾನತ್ತಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಳಗೆ ನಮೂದಿಸಿರುವ ಆಡಳಿತ ಸುಧಾರಣಾ ಕ್ರಮವನ್ನು ರೂಪಿಸಿಕೊಳ್ಳಲಾಗಿದೆ,

ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಉದ್ದೇಶಿಸಿದ ಅಥವಾ ಬಾಕಿ ಇರುವ ಅಥವಾ ಕ್ರಿಮಿನಲ್ ಮೊಕದ್ದಮೆಯು ವಿಚಾರಣೆಯಲ್ಲಿದ್ದರೆ ಅಂತಹ ಪ್ರಕರಣಗಳಲ್ಲಿ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡಲು ಕರ್ನಾಟಕ ಸಿವಿಲ್ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, ೧೯೫೭ರ ನಿಯಮ ೧೦ರ ಪ್ರಕಾರ ಅವಕಾಶವಿದೆ, ಆದರೂ ಸಹ ಸರಕಾರಿ ನೌಕರರು ಅನಿರ್ದಿಷ್ಟ ಕಾಲದವರೆಗೆ ಅಮಾನತ್ತಿನಲ್ಲಿ ಮುಂದುವರೆಯುವುದನ್ನು ತಪ್ಪಿಸಲು ಕೆಳಕಂಡ ಪ್ರಕರಣಗಳಲ್ಲಿ ಅಮಾನತ್ತನ್ನು ರದ್ದುಗೊಳಿಸಿ ಸರ್ಕಾರಿ ನೌಕರರನ್ನು ಪುನರ್ ನೇಮಿಸಿಕೊಳ್ಳಲು ಮಾರ್ಗ ಸೂಚನೆ ನೀಡಲಾಗಿದೆ.

ಅ) ಅಮಾನತ್ತಿನಲ್ಲಿಟ್ಟ ದಿನದಿಂದ ಮೂರು ತಿಂಗಳೊಳಗೆ ಇಲಾಖಾ ತನಿಖೆ ವಿಚಾರಣೆ ಪ್ರಾರಂಭವಾಗದಿದ್ದರೆ

ಆ) ಇಲಾಖಾ ತನಿಖೆಯು ಶುರುವಾದ ದಿನದಿಂದ ಆರು ತಿಂಗಳೊಳಗೆ ಮುಗಿಯದಿದ್ದರೆ

ಇ) ಇಲಾಖಾ ತನಿಖೆಯು ಮುಂಗಿದ ಮೂರು ತಿಂಗಳೊಳಗೆ ಇಲಾಖಾ ವಿಚಾರಣೆಯು ಶುರುವಾಗದಿದ್ದರೆ

ಈ) ಅಮಾನತ್ತಿನಲ್ಲಿಟ್ಟ ಹನ್ನೆರಡು ತಿಂಗಳೊಳಗೆ ಇಲಾಖಾ ವಿಚಾರಣೆ ಮುಂಗಿಯದಿದ್ದರೆ ಅಥವಾ ಇಲಾಖಾ ವಿಚಾರಣೆಯು ಶುರುವಾದ ಹನ್ನೆರಡು ತಿಂಗಳುಗಳಲ್ಲಿ ಮುಗಿಯದಿದ್ದರೆ

ಮೇಲೆ ನಮೂದಿಸಿರುವ ಕಾಲಾವಧಿಯೊಳಗೂ ಸಹ ಅವಶ್ಯವೆನಿಸಿದಲ್ಲಿ ಅಮಾನತ್ತಿನಲ್ಲಿಟ್ಟ ಸರ್ಕಾರಿ ನೌಕರರನ್ನು ಪುನರ್ ನೇಮಿಸಿಕೊಳ್ಳಲು ಅವಕಾಶವಿದೆ ಹಾಗೆಯೇ ಈ ಕಾಲಾವಧಿಗೆ ಅಂಟಿಕೊಳ್ಳಲು ಸಾಧ್ಯವಾಗದೆ ಕ್ಲಿಷ್ಟ ಪ್ರಕರಣಗಳಲ್ಲಿ ಅಮಾನತ್ತನ್ನು ಮುಂದುವರೆಸಬೇಕೆಂದು ಯಾವುದೇ ಇಲಾಖೆಯು ಅಭಿಪ್ರಾಯಪಟ್ಟಲ್ಲಿ ಅಂತಹ ಪ್ರಕರಣಗಳನ್ನು ಪುನರ್ ವಿಲೋಕಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಲು ಅವರ ಮಂಖ್ಯೆ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಮುಂದೆ ಅಂತಹ ಪ್ರಕರಣಗಳನ್ನು ಮಂಡಿಸಬೇಕಾಗುತ್ತದೆ.

ತರೀಕೆರೆ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು

೮೮೪. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳಿವೆ ?

ಆ) ಪ್ರಜಾ ಸಂಖ್ಯೆ ಆಧಾರದ ಮೇಲೆ ಇನ್ನೂ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳು ಬೇಕಾಗಿವೆ ?

ಇ) ಅಲ್ಲಿನ ಸಾರ್ವಜನಿಕರು ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಕೇಳಿದ್ದಾರೆ ಮತ್ತು ಅವುಗಳನ್ನು ಸರ್ಕಾರ ಕೊಡುವ ಆಲೋಚನೆ ಇದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೧೪

ಆ) ಬದಲಾದ ಸರ್ಕಾರಿ ನೀತಿಯಂ ಪ್ರಕಾರ ಪ್ರಸ್ತುತ ವರ್ಷದಿಂದ ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಸ್ಥಾಪಿಸುವುದನ್ನು ರದ್ದುಗೊಳಿಸಲಾಗಿದೆ.

ಇ) ತರೀಕೆರೆ ತಾಲ್ಲೂಕಿನ ೭ ಗ್ರಾಮಗಳ ಸ್ಥಳೀಯರು ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿಗಾಗಿ ಮನವಿ ಸಲ್ಲಿಸಿದ್ದಾರೆ. ಬದಲಾದ ಪರಿಸ್ಥಿತಿಯಿಂದಾಗಿ ಈ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡಲಾಗುವುದು ಸಾಧ್ಯವಿಲ್ಲ. ಆದರೆ ಭಾರತ ಸರ್ಕಾರದ ಮಾದರಿಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವುದನ್ನು ಪರಿಶೀಲಿಸಬಹುದು.